ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: (ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ ಕಲ್ಯಾಣ ಸಮಿತಿ)

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ  ದಿನಾಂಕ : DATE : 16/06/2019

ವಿ.ಕ. 16-06-2019

ಎಸ್‌ಸಿ, ಎಸ್‌ಟಿ ಕಲ್ಯಾಣ ಸಮಿತಿ ಅಧ್ಯಕ್ಷರ ತರಾಟೆ | ಕೇಸ್ ದಾಖಲಿಸದೇ ರಾಜಿ ಮಾಡುವುದು ಕೆಟ್ಟ ಚಾಳಿ

# ಬೆತ್ತಲೆ ಪ್ರಕರಣದಲ್ಲಿ ಪೊಲೀಸ್ ವೈಫಲ್ಯ

**ವಿಕ ಸುದ್ದಿಲೋಕ** ಗುಂಡ್ಲುಪೇಟೆ

ಪೊಲೀಸರು ಪ್ರಕರಣದ ಗಂಭೀರತೆ ಅರಿಯದೇ ರಾಜಿ ಸಂಧಾನ, ಕೌಂಟರ್ ಕೇಸ್‌ಗೆ ಹೆಚ್ಚು ಒಲವು ತೋರುವುದು ಸರಿಯಾದ ಕ್ರಮವಲ್ಲ. ಬೆತ್ತಲೆ ಮೆರವಣಿಗೆ ಪ್ರಕರಣಕ್ಕೆ ಪೊಲೀಸರ ಕರ್ತವ್ಯ ಲೋಪವೂ ಕಾರಣವಾಗಿದೆ ಎಂದು ವಿಧಾನ ಮಂಡಲ ಅನುಸೂಚಿತ ಜಾತಿ ಮತ್ತು ಪಂಗಡಗಳ ಕಲ್ಯಾಣ ಸಮಿತಿ ಅಧ್ಯಕ್ಷ ಎಚ್.ಕೆ. ಕುಮಾರಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದರು.

ಶನಿವಾರ ಕೆಬ್ಬೇಕಟ್ಟೆ ಶನೇಶ್ವರ ದೇವಾಲಯಕ್ಕೆ ಭೇಟಿ ನೀಡಿ ಪರಿಶೀಲನೆ ಹಾಗೂ ಘಟನೆ ಸಂಬಂಧ ಮಾಹಿತಿ ಪಡೆದ ಅವರು, ''ಈ ದುಷ್ಕೃತ್ಯ ನಡೆದ ದಿನವೇ ಪೊಲೀಸರು ಪ್ರಕರಣ ದಾಖಲಿಸಿಕೊಳ್ಳುವುದನ್ನು ಬಿಟ್ಟು ರಾಜಿ ಸಂಧಾನಕ್ಕೆ ಹೆಚ್ಚು ಒತ್ತು ಕೊಟ್ಟದ್ದು ಸರಿಯಲ್ಲ. ಇದೊಂದು ಕೆಟ್ಟ ಸಂಪ್ರದಾಯ. ಹಲ್ಲೆಗೊಳಗಾದ ಯುವಕನಿಗೆ ಸಮೀಪದ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುವಷ್ಟೂ ಸಾಮಾನ್ಯ ಜ್ಞಾನವನ್ನು ಪೊಲೀಸರು ತೋರಿಸಿಲ್ಲ. ಈ ಬಗ್ಗೆ ಶಿಸ್ತು ಕ್ರಮ ಕೈಗೊಳ್ಳಿ,'' ಎಂದು ಸ್ಥಳದಲ್ಲೇ ಹಾಜರಿದ್ದ ದಕ್ಷಿಣ ವಲಯ ಐಜಿಪಿ ಉಮೇಶ್ ಕುಮಾರ್ ಅವರಿಗೆ ಸಮಿತಿ ಅಧ್ಯಕ್ಷರು ಸೂಚಿಸಿದರು.

''ಯುವಕ ಮಾನಸಿಕ ಅಸ್ವಸ್ಥನೇ ಇರಲಿ. ಹಾಗಂತ ಆತನನ್ನು ಬೆತ್ತಲೆಯಾಗಿ ಮೆರವಣಿಗೆ ಮಾಡಿದ್ದು, ಹಲ್ಲೆ ನಡೆಸಿರುವುದು ಅಮಾನವೀಯ. ಹೀಗಾಗಿ ತಪ್ಪಿತಸ್ಥರನ್ನು ಸುಮ್ಮನೆ ಬಿಡುವ ಮಾತೇ ಇಲ್ಲ,'' ಎಂದು ಅವರು ಖಡಕ್ ಆಗಿ ಹೇಳಿದರು.



ಗುಂಡ್ಲುಪೇಟೆ ತಾಲೂಕಿನ ಕೆಬ್ಬೇಕಟ್ಟೆ ಶ್ರೀ ಶನೇಶ್ವರ ದೇವಾಲಯಕ್ಕೆ ವಿಧಾನ ಮಂಡಲ ಅನುಸೂಚಿತ ಜಾತಿ ಮತ್ತು ಪಂಗಡಗಳ ಕಲ್ಯಾಣ ಸಮಿತಿ ಸದಸ್ಯರು ಭೇಟಿ ನೀಡಿ ಪರಿಶೀಲಿಸಿದರು.

ಈ ನಡುವೆ ಪೊಲೀಸರಿಗೆ ಘಟನೆ ಬಗ್ಗೆ ತಕ್ಷಣವೇ ಮಾಹಿತಿ ರವಾನೆಯಾಗಿದೆ. ಅವರು ಕೂಡಲೇ ಸ್ಥಳಕ್ಕೆ ಧಾವಿಸಿದ್ದರೆ ಎಲ್ಲವನ್ನೂ ತಡೆಯಬಹುದಿತ್ತು. ಇದರಲ್ಲಿ ಪೊಲೀಸರ ಲೋಪವೇ ಹೆಚ್ಚಾಗಿದೆ ಎನಿಸುತ್ತಿದೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ''ಲೋಪ ಯಾರದೇ ಇರಲಿ,ಸೂಕ್ತ ತನಿಖೆ ನಡೆಸಿ ಕ್ರಮ ಜರುಗಿಸಲಾಗುವುದು,'' ಎಂದರು.

**ಅಮಾನತುಗೊಳಿಸಿ:** ''ಈ ಖಾಸಗಿ ಒಡೆತನದ ದೇವಾಲಯವನ್ನು ಮುಜರಾಯಿಗೆ ವಹಿಸಬೇಕು. ಪೊಲೀಸ್ ಲೋಪ ಇರುವ ಕಾರಣ ಡಿವೈಎಸ್ಪಿ, ಸಿಪಿಐ ಅವರನ್ನು ಅಮಾನತಿನಲ್ಲಿಡಬೇಕು,'' ಎಂದು ಕೆಲವರು ಆಗ್ರಹಿಸಿದರು.

## ಸಂತ್ರಸ್ತ ಹೇಳಿದ್ದೇನು?

''ಘಟನೆ ಹಿನ್ನೆಲೆಯಲ್ಲಿ ನಾನು ಯುವಕನನ್ನು ಭೇಟಿಯಾಗಿ ಮಾತನಾಡಿಸಿ ಬಂದಿದ್ದೇವೆ. ಆತ ಬಟ್ಟೆ ಇಲ್ಲದೇ ದೇವಾಲಯಕ್ಕೆ ಹೋದ ಬಗ್ಗೆ ನನಗೇನು ಗೊತ್ತಿಲ್ಲ ಎಂದಿದ್ದಾನೆ. ಅಲ್ಲದೇ ದೇವಾಲಯದಲ್ಲಿ ಕೇಳಿದಾಗ ನೀರು ಕೊಟ್ಟರು. ನಂತರ ತಳ್ಳಾಟ, ನೂಕಾಟ ಆಯಿತು,'' ಎಂದು ಯುವಕ ಸಮಿತಿಗೆ ತಿಳಿಸಿದ್ದಾರೆ ಎಂದು ಸಮಿತಿ ಅಧ್ಯಕ್ಷ ಎಚ್.ಕೆ. ಕುಮಾರಸ್ವಾಮಿ ತಿಳಿಸಿದರು.

ಪ್ರತಿಕ್ರಿಯೆ ನೀಡಿದ ಸಮಿತಿ ಅಧ್ಯಕ್ಷರು, ''ಈ ಬಗ್ಗೆ ಜಿಲ್ಲಾಡಳಿತ ಅಥವಾ ಸಂಬಂಧಿಸಿದ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಾರೆ,'' ಎಂದರು.

## ಜೀವ ಬೆದರಿಕೆ ಹಾಕಿ ದಲಿತ ಯುವತಿ ಮೇಲೆ ಅತ್ಯಾಚಾರ

**ಮೂಡುಬಿದಿರೆ(ಮಂಗಳೂರು):** ಜೀವ ಬೆದರಿಕೆ ಹಾಕಿ ಆರು ವರ್ಷಗಳಿಂದ ಲೈಂಗಿಕ ದೌರ್ಜನ್ಯ ನಡೆಸುತ್ತಿದ್ದಾನೆ ಎಂದು ದಲಿತ ಯುವತಿಯೊಬ್ಬರು ಮಂಗಳೂರಿನ ಪಾಂಡೇಶ್ವರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಮಂಗಳೂರಿನ ... ಉಚ್ಚಿಲ್ ಎಂಬಾತನ ಮನೆಯಲ್ಲಿ ಆರು ವರ್ಷಗಳಿಂದ ಮನೆಗೆಲಸ ಮಾಡಿಕೊಂಡಿದ್ದೆ. ಆತ ಲೈಂಗಿಕ ಕ್ರಿಯೆಗೆ ಒತ್ತಾಯಿಸುತ್ತಿದ್ದ. ನಿರಾಕರಿಸಿದರೆ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡುತ್ತಿದ್ದ. ಅಲ್ಲದೆ ನಿದ್ರೆ ಮಾತ್ರೆ ನುಂಗಿಸಿ ಲೈಂಗಿಕ ದೌರ್ಜನ್ಯ ನಡೆಸುತ್ತಿದ್ದ. ಮೂರು ಬಾರಿ ಗರ್ಭಿಣಿಯಾಗಿದ್ದೆ. ಆಗ ವೈದ್ಯರೊಬ್ಬರ ಬಳಿ ಕರೆದುಕೊಂಡು ಹೋಗಿ ಗರ್ಭಪಾತ ಮಾಡಿಸಿದ್ದಾನೆ ಎಂದು ದೂರಿನಲ್ಲಿ ತಿಳಿಸಿದ್ದಾರೆ. ಇತ್ತೀಚೆಗೆ ಯುವತಿ ತನ್ನ ಮನೆಯವರಿಗೆ ವಿಷಯ ತಿಳಿಸಿದ್ದು, ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.